# ಆಯಗಾರಿಕೆ ಮತ್ತು ಹರಿಜನರು (ಛಲವಾದಿಗರು)
# (ವಿಜಯಪುರ ಜಿಲ್ಲೆ ಅನುಲಕ್ಷಿಸಿ)

**ಬಸೀರಾಬಾನು ನಿಡಗುಂದಿ**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಬಸವನ ಬಾಗೇವಾಡಿ.

**DOI: https://doi.org/10.5281/zenodo.15504155**

## ABSTRACT:

ಕೃಷಿ ಭಾರತೀಯ ಗ್ರಾಮಗಳ ಪ್ರಧಾನ ವೃತ್ತಿಯಾಗಿದ್ದು, ಜನಸಂಖ್ಯೆಯ ಬಹುತೇಕ ಭಾಗ ವರ್ಷವಿಡೀ ಕೃಷಿಯಲ್ಲಿಯೇ ತೊಡಗಿರುತ್ತದೆ. ಗ್ರಾಮ ಜೀವನವು ಪರಸ್ಪರಾವಲಂಬಿಯಾಗಿ, ಹಲವಾರು ವಿಶಿಷ್ಟ ಸೇವಾ, ವಿನಿಮಯ ಮತ್ತು ಸಾಂಸ್ಕೃತಿಕ ವೈಶಿಷ್ಟ್ಯಗಳ ಸಂಗಮವಾಗಿದೆ. ರೈತರು ಒಕ್ಕಲುತನದ ಜೊತೆಗೆ-ಬಡಿಗೇರರು ಬಡಗಿತನ, ಕಮ್ಮಾರರು ಕಮ್ಮಾರಿಕೆ, ಕುಂಬಾರರು ಕುಂಬಾರಿಕೆ, ನೇಕಾರರು ನೇಕಾರಿಕೆ, ಮಡಿವಾಳರು ಬಟ್ಟೆಗಳನ್ನು ಶುಚಿಮಾಡಿಕೊಡುವುದು, ಚಮ್ಮಾರರು ಚಮ್ಮಾರಿಕೆ ಇಂತಹ ವಿವಿಧ ಕಾಯಕಗಳಲ್ಲಿ ನಿರತರಾಗಿದ್ದಾರೆ. ಹಣದ ಚಲಾವಣೆ ಅಧಿಕೃತವಾಗಿ ಆರಂಭವಾದ ಸಂದರ್ಭದಲ್ಲಿಯೂ ಸಹ, ಕೃಷಿಕರು ಬೆಳೆಯುವ ದವಸಧಾನ್ಯಗಳು ತಮಗೆ ಬೇಕಾದ ಬಟ್ಟೆ-ಬರೆ, ಪಾತ್ರೆ ಪಗಡೆ ಮತ್ತು ಸೇವೆಗೆ ಪ್ರತಿಫಲವಾಗಿ ನೀಡುವ ಪರಿಪಾಟ ಗ್ರಾಮೀಣ ಪ್ರದೇಶದಲ್ಲಿ ಬೆಳೆದುಬಂದಿದೆ. ಅಂತಹ ವಿಶಿಷ್ಟ ಸೇವೆಗಳನ್ನು ಸಲ್ಲಿಸುವ ಕೆಲಸಗಾರರಿಗೂ ಮತ್ತು ಕೃಷಿಕರಿಗೂ ನಿಕಟವಾದ ಸಂಬಂಧ ತಲೆತಲಾಂತರವಾಗಿ ಗ್ರಾಮಗಳಲ್ಲಿ ಸಾಗಿಬಂದಿದೆ. ಈ ಬಗೆಯ ಸಹಕಾರ ಜೀವನ ವ್ಯವಸ್ಥೆ ಭಾರತೀಯ ಗ್ರಾಮಗಳಲ್ಲಿ ಪ್ರಾಚೀನ ಕಾಲದಿಂದಲೂ ನಡೆದು ಬಂದ ಒಂದು ವಿಶಿಷ್ಟ ಅಂಶವಾಗಿದ್ದು, ಹಲವಾರು ಗ್ರಾಮಗಳಲ್ಲಿ ಇಂದಿಗೂ ಸಹ ಪ್ರಚಲಿತವಾಗಿರುವುದನ್ನು ಕಾಣುತ್ತೇವೆ.

## KEYWORDS:

ಆಯಗಾರ, ಛಲವಾದಿಗ, ಗ್ರಾಮೀಣ, ಹೊಲೆಯ, ಸಮುದಾಯ.

ಕೃಷಿಗೆ ಪೂರಕ ಮತ್ತು ಗ್ರಾಮೀಣ ಕೃಷಿ ಸಮುದಾಯದ ದೈನಂದಿನ ಜನಜೀವನಕ್ಕೆ ಬೇಕಾದ ಸೇವೆ ಮತ್ತು ವಸ್ತುಗಳನ್ನು ಒದಗಿಸುವ ವೃತ್ತಿ ಸಮುದಾಯಗಳಿವೆ. ಇಂತಹ ಸಮುದಾಯಗಳಿಗೆ ರೈತರು ತಾವು ಬೆಳೆದಿದ್ದ ದವಸ ಧಾನ್ಯಗಳಲ್ಲಿ ಒಂದು ಪಾಲನ್ನು ರಾಶಿಯ ಸಮಯದಲ್ಲಿ ನೀಡುವರು. ಇದಕ್ಕೆ 'ಆಯ' ಎಂದು ಕರೆಯುತ್ತಾರೆ. 'ಆಯ' ಕೊಡುವವರನ್ನು 'ಆಯದ ಕುಳ' ಅಥವಾ 'ವತನದಾರ'ರೆಂದು ಕರೆಯುವರು. 'ಆಯ' ಪಡೆಯುವವರು 'ಆಯದವರು' ಅಥವಾ 'ಆಯಗಾರರು' ಎನಿಸುತ್ತಾರೆ. ಒಂದು ಭೌಗೋಳಿಕ ಪ್ರದೇಶಕ್ಕೆ ಸಂಬಂಧಿಸಿದ

ವಿಭಿನ್ನ ಕುಲ ಕಸುಬಿನ ಜನ ಸಮುದಾಯದವರು ತಮ್ಮ ಉತ್ಪನ್ನಗಳನ್ನು ಮತ್ತು ಸೇವೆಗಳನ್ನು ಪರಸ್ಪರ ತಮ್ಮ ತಮ್ಮೊಳಗೆ ವಿನಿಮಯಿಸಿಕೊಳ್ಳುವರು ಇದೇ 'ಆಯಗಾರಿಕೆ'. ಗ್ರಾಮೀಣ ಆಯಗಾರರಲ್ಲಿ ಪ್ರಮುಖರೆಂದರೆ ಜಂಗಮರು, ಹೂಗಾರರು, ಪೂಜಾರಿಗಳು, ಕುಂಬಾರರು, ಕಂಬಾರರು, ನಾವಿದರು (ಹಡಪದ), ಬಡಿಗೇರರು, ಕೊರವರು (ಬಜಂತ್ರಿ), ತಳವಾರರು, ಕೋಲಕಾರರು, ವಾಲಿಕಾರರು, ಅಗಸರು(ಮಡಿವಾಳರು), ಛಲವಾದಿಗರು(ಹರಿಜನರು), ಸಮಗಾರರು ಮತ್ತು ಮುಲ್ಲಾಗಳು ಇತ್ಯಾದಿ.

ಸಂಕ್ಷಿಪ್ತ ಕನ್ನಡ ನಿಘಂಟಿನಲ್ಲಿ–'ಆಯ'ಎಂಬ ಪದಕ್ಕೆ 12 ಅರ್ಥಗಳಿದ್ದು, ಇವುಗಳಲ್ಲಿ ಮುಖ್ಯವಾಗಿ–'ಆದಾಯ, ವರಮಾನ, ಹುಟ್ಟುವಳಿ, ಕಂದಾಯ, ಹಳ್ಳಿಗಳಲ್ಲಿ ವಂಶಪಾರಂಪರೆಯಿಂದ ಸೇವೆ ಸಲ್ಲಿಸಿಕೊಂಡು ಬಂದಿರುವವರಿಗೆ ಕಣದಲ್ಲಿ ರಾಶಿ ಮಾಡುವಾಗ ಅಳೆದುಕೊಡುವ ನಿರ್ದಿಷ್ಟ ಪ್ರಮಾಣದ ಧಾನ್ಯ–ವರ್ಷಾಶನ'; 'ಆಯಕಾರ'–ಕೆಲಸದ ರಹಸ್ಯವನ್ನು ತಿಳಿದವ;'ಆಯಗಾರ'–ವಂಶಪಾರಂಪರ್ಯವಾಗಿ ಗ್ರಾಮಕ್ಕೆ ಸೇವೆ ಸಲ್ಲಿಸುತ್ತಿರುವ ಸೇವಕ, ಊರಿನ ಮುಖ್ಯಸ್ಥರ ಮನೆಗಳಿಂದ ಅನ್ನ, ಆಹಾರ ಮುಂತಾದವುಗಳನ್ನು ಸಾಂಪ್ರದಾಯಿಕವಾಗಿ ಪಡೆದುಕೊಳ್ಳುವವನು, ವಂಶಪಾರಂಪರ್ಯವಾಗಿ ಗ್ರಾಮಕ್ಕೆ ಸೇವೆ ಸಲ್ಲಿಸುವ ಸೇವಕ'' ಮುಂತಾದ ಅರ್ಥಗಳಿವೆ. ಕನ್ನಡದ 'ಕಾರ–ಗಾರ' ಪ್ರತ್ಯಯಗಳ ಅರ್ಥವನ್ನು ಗಮನಿಸಿದರೆ, ಆದಾಯಕ್ಕೆ ಕಾರಣನಾದವನು, ಆದಾಯದಲ್ಲಿ ನಿರತನಾದವನೆಂದೂ ಅರ್ಥ ಮಾಡಬಹುದು. ತಮ್ಮ ಕೈ ಕೆಲಸದಿಂದ, ವೃತ್ತಿಯಿಂದ ಜೀವನಾವಶ್ಯಕವಾದ ಸಾಮಗ್ರಿಗಳ ಆದಾಯ ಉತ್ಪತ್ತಿ ಬರುವುದು, ಕಾರಣ ಅವರು ಆದಾಯಕಾರರು, ಆದಾಯ ತರುವ ವೃತ್ತಿಗಾರರು 'ಆಯಗಾರರು'.

ಎಫ್. ಕಿಟಲ್ ಕನ್ನಡ–ಇಂಗ್ಲೀಷ್ ನಿಘಂಟುವಿನಲ್ಲಿ 'ಆಯ' ಎಂಬುದಕ್ಕೆ 'corn given by the well–to–do villagers to hereditary servants of the village as their established fees of office' (ಹಳ್ಳಿಗಳಲ್ಲಿ ಆನುವಂಶೀಯ ಸೇವಕರಾಗಿದ್ದವರಿಗೆ ಅನುಕೂಲಸ್ಥ ಹಳ್ಳಿಗರು ಕಾಳಿನ ರೂಪದಲ್ಲಿ ನಿಗದಿಯಾದ ಪ್ರಮಾಣದಲ್ಲಿ ನೀಡುವ ಅವರ ಕೆಲಸದ ಸಂಭಾವನೆ), 'ಆಯಗಾರ' ಎಂದರೆ ''ಆಯಗಾರ–aya– gara– A clever man. 'ಆಯಗಾರ'–aya– gara– A hereditary village servant such servat are eg–ಗವುಡ, ಶಾನಭೋಗ, ಜೋಯಿಸ, ಪತ್ತಾರ, ಕಮ್ಮಾರ, ಕುಂಬಾರ, ಬಡಗಿ, ನಾಯಿದ ಮುಂತಾದವರು. ಆಯಗಾರ್ತಿ–aya–garti–A clever woman ಎಂದಿದೆ.

ಉತ್ತರ ಕರ್ನಾಟಕ ಪ್ರದೇಶಗಳಲ್ಲಿ ಕೆಲವೆಡೆ 'ಆಯ'ವನ್ನು–'ಕಣ ಮತ್ತು

ಬಾರಹಬಲೂತ' ಎಂದು; ಮಂಡ್ಯ ಮತ್ತು ಮೈಸೂರುಗಳಲ್ಲಿ 'ಅಡದೆ' ಎಂದು; ಉತ್ತರ ಕನ್ನಡ ಜಿಲ್ಲೆಯ ಅಂಕೋಲಾದ ಸೀಮೆಯಲ್ಲಿ 'ಎಚ್ಚ' ಎಂದು ಕರೆಯುತ್ತಾರೆ. 'ಎಚ್ಚ' ಅಥವಾ 'ಎಚ್ಚಕ' ಎಂದರೆ ಕೊಡುವವನು, ದಾತ ಎಂದರ್ಥ; ಬಾಬು(ಬಾಬುದಾರರು, ಬಾಬಿನವರು) ಎಂದರೆ ವಸ್ತು, ಪದಾರ್ಥ ಅಥವಾ ರೂಢಿಯಾಗಿ ಕೊಡುವ ಪದಾರ್ಥ ಎಂದರ್ಥ(ಸಂಕ್ಷಿಪ್ತ ಕನ್ನಡ ನಿಘಂಟು-ಕನ್ನಡ ಸಾಹಿತ್ಯ ಪರಿಷತ್ತು ). ಹೀಗೆ ಆಯಗಾರರನ್ನು ಬೇರೆ ಬೇರೆ ಪ್ರದೇಶದಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯುವುದನ್ನು ಕಾಣಬಹುದು. ಆಯಗಾರರಾಗಿ ಹರಿಜನರ ಪಾತ್ರ ವಿಶೇಷವಾದದ್ದು. ಕೃಷಿಕರ ಮತ್ತು ಹರಿಜನ ಆಯಗಾರರ ಸಂಬಂಧ ತಲೆತಲಾಂತರದಿಂದ ಸಾಗಿಬಂದಿದೆ.

ಹರಿಜನರಿಗೆ 'ಛಲವಾದಿಗರು', 'ಹೊಲೆಯರು' ಎಂದು ಕರೆಯಲಾಗುವುದು. ಹೊಲೆಯರ ಮೂಲದ ಬಗೆಗೆ ಜನಪದ ತ್ರಿಪದಿಯಲ್ಲಿ ಹೀಗೆ ಹೇಳಲಾಗಿದೆ;

**`ಹೊಲೆಯನೆಂದು ಅವನ ಕುಲ ಎತ್ತಿ ಬೈಬ್ಯಾಡ್ರಿ**
**ಕುಲ ಮೇಲೋ ಅವನ ಛಲ ಮೇಲೋ। ಹೊನ್ನಯ್ಯನ**
**ಕುಲವ ಕೊಂಡಾಡೋ ಮಗ ಮೇಲೋ'**[1]

ಇಲ್ಲಿ ಬರುವ 'ಹೊನ್ನಯ್ಯ'ನು ಹೊಲೆಯರ ಮೂಲ ಪುರುಷನಾಗಿರಬೇಕು. ಈತನ ಸಂತತಿಯವರೇ 'ಛಲವಾದಿ'ಗರಾಗಿ ಉಳಿದಿದ್ದಾರೆ. 'ಛಲವಾದಿ' ಎಂಬ ನಾಮಪದದ ಅರ್ಥ 'ಛಲವನ್ನು ಸಾಧಿಸುವವರು', 'ಹಟವಾದಿಗರು' ಎಂದರ್ಥ. ಇದರಲ್ಲಿ ಮೊದಲಿನ ನಾಮಪದ 'ಛಲ' ಎಂದರೆ ಸ್ಥಿರ, ಸಂಕಲ್ಪ, ದೃಢತೆ, ಎಂದು, ಎರಡನೆಯ ಪದ 'ವಾದಿ' ಎಂದರೆ ವಾದಿಸುವವನು, ತರ್ಕ ಮಾಡುವವನು, ವಿಷಯವನ್ನು ನಿರೂಪಿಸುವವನು ಎಂಬರ್ಥಗಳಿವೆ. 'ಕ್ರಿ. ಶ. 1530 ರ ಶಾಸನದಲ್ಲಿ 'ಸುಂಕ ತಳವಾರ ಅನುಪುಮಗಾಮೆ ಚಲವಾದಿ ಸಂಗಡ ಚಲವಾದಿ ಛಂದವಿಡೆನ್ನ' ಎಂದು ಶತಕ ಸಾಹಿತ್ಯದಲ್ಲಿ ಚಿಕ್ಕುಪಾಧ್ಯಾಯ ಬಳಸಿದ್ದಾನೆ'.[2] ಈ ಪದ ಬಳಕೆಯನ್ನು ಗಮನಿಸಿದರೆ ಇದು ಜನಾಂಗವಾಚಿಯಾಗಿ ಬಳಕೆಯಾಗಿರುವುದು ಕಡಿಮೆ. ಛಲವಾದಿ ಎಂಬ ಪದಕ್ಕೆ ಪರ್ಯಾಯವಾಗಿ ಅನೇಕ ದಾಖಲೆಗಳಲ್ಲಿ 'ಹೊಲೆಯ' ಪದ ಬಳಕೆಯಾಗಿರುವುದು ಕಂಡು ಬರುತ್ತದೆ. ಕನ್ನಡದಲ್ಲಿ 'ಹೊಲೆಯ' ಎಂಬುದು ಜಾತಿ(ಜಾತಿ ಸೂಚಕವಾಗಿ ಹೊಲೆಯ, ಹೊಲೆಯರು ಎಂದು) ಹಾಗೂ ವೃತ್ತಿ(ವೃತ್ತಿ ಸೂಚಕವಾಗಿ ಊರು ಮಾಡುವ ಹೊಲೆತನ, ವತನಕಿಯವರು) ಸೂಚಕವಾಗಿ ಬಳಕೆಯಲ್ಲಿದೆ. 'ಹಳಗನ್ನಡದ 'ಪೊಲೆಯ', ತಮಿಳಿನ 'ಪುಲೈಯನ್', ಮಲೆಯಾಳಂನ 'ಪುಲಯನ್'' ಇವುಗಳ ಮೂಲರೂಪ ಪೊಲೆ. ಪ>ಹ ಕಾರವಾಗಿ ಪರಿವರ್ತನೆ ಹೊಂದಿದೆ. 'ಪೊಲೆ' ಎಂದರೆ ಅಶುದ್ಧ, ಕೊಳಕು ಎಂದರ್ಥ. 'ಪೊ(ಹೊ)ಲಸು' ಎಂಬಲ್ಲಿ ಕೂಡಾ ಅದೇ ಪ್ರಕೃತಿ ರೂಪದ ಅರ್ಥವಿದೆ. 'ಪೊ(ಹೊ)

ಲೆಯ' ಎಂದರೆ ಕೊಳಕಾಗಿರುವವನು ಅಥವಾ ಮುಟ್ಟಿದರೆ ಮೈಲಿಗೆಯುಂಟು ಮಾಡುವವನು ಎಂದರ್ಥ'.[3] ಒಟ್ಟಿನಲ್ಲಿ ಈ ಎಲ್ಲ ಪದಗಳ ವಿಶ್ಲೇಷಣೆಯಿಂದ ತಿಳಿದುಬರುವ ಸಂಗತಿ ಎಂದರೆ, 'ಛಲವಾದಿ' ಪದಕ್ಕೆ ಮೊದಲು ಸಂವಾದಿಯಾಗಿ 'ಹೊಲೆಯ' ಪದ ಬಳಕೆಯಲ್ಲಿತ್ತು. 'ಹೊಲ' ಈ ಪದದ ಮೂಲ ರೂಪ. ಇದು ಕೃಷಿ, ಕಾಯಕ ಪದ ಎಂಬುದು ಸ್ಪಷ್ಟ. ಹೊಲದೊಡೆಯರು ಕ್ರಮೇಣ ಊರ ಹೊರಗಿನ ಹೊಲೆಯರಾಗಿ ಶೋಷಣೆಗೊಂಡಿರುವುದು ಸೂಚಿಸುತ್ತದೆ. ಸರ್ವಜ್ಞನ ಅಭಿಪ್ರಾಯದಲ್ಲಿ ಹೊಲಗೇರಿ ಎಂಬುದು ಈ ಭೂಮಿಯಲ್ಲಿ ಮಾತ್ರವಿದೆ. ಸ್ವರ್ಗದಲ್ಲಿ ಇಂತಹ ತಾರತಮ್ಯವಿಲ್ಲ ಎಂದು ತ್ರಿಪದಿಯಲ್ಲಿ ದಾಖಲಿಸಿದ್ದಾರೆ. ಹೊಲದ ಕೆಲಸ ಮಾಡುತ್ತಿದ್ದವರು ಹೊಲಸು ತೆಗೆಯುವವರಾಗಿ ಮಾರ್ಪಟ್ಟ ರೀತಿ ಜಾತಿ ತಾರತಮ್ಯದ ನೆಲೆಯಲ್ಲಿ ನೋಡಬೇಕಾಗಿದೆ.

**`ಕುಲವಿಲ್ಲ ಯೋಗಿಗೆ ಛಲವಿಲ್ಲ ಜ್ಞಾನಿಗೆ**
**ತೊಲೆ ಕಂಬವಿಲ್ಲ ಗಗನಕೆ। ಸ್ವರ್ಗದಲಿ**
**ಹೊಲಗೇರಿಯಿಲ್ಲ ಸರ್ವಜ್ಞ'**

ಹರಿಜನರನ್ನು 'ಪಾಡೇವಾರರು, ದೀವಟಿಗರು, ಛಲವಾದಿಗರು' ಎಂದೂ ಕರೆಯುವರು. ವಿಜಯಪುರದ ಪ್ರದೇಶದಲ್ಲಿ 1. ಡಾಲಿ ಹೊಲೆಯ, 2. ಕಾಳಿ ಹೊಲೆಯ, 3. ಹೊಲೆಯದಾಸ, 4. ಬೇಗಾರ, 5. ದೀವಟಿಗೆ ಹೊಲೆಯರು ಹೀಗೆ ಕೆಲವು ಪಂಗಡಗಳಿವೆ. ಆದರೆ ಇವು ಪಂಗಡಗಳಾಗದೆ, ವೃತ್ತಿ ಸೂಚಕವಾಗಿ ಬಳಸಲಾಗಿದೆ ಎನ್ನಬಹುದು. ಇವರು ಆನುವಂಶೀಯವಾಗಿ ತಮ್ಮ ಸೇವೆಯನ್ನು ಹಳ್ಳಿಗಳಿಗೆ ಸಲ್ಲಿಸುತ್ತಾ ಬಂದಿದ್ದಾರೆ.

**`ಸತ್ತ ಕತ್ತೆಯ ಹೊತ್ತರೆತ್ತಣದ ಹೊಲೆಯ**
**ಉತ್ತಮನೆಂಬ ಹೆರರೊಡವೆ। ಹೊತ್ತವನೆ**
**ನಿತ್ಯವೂ ಹೊಲೆಯ ಸರ್ವಜ್ಞ'**

ಊರ ನೈರ್ಮಲ್ಯವನ್ನು ಕಾಪಾಡಲು ಸತ್ತ ಕತ್ತೆಗಳನ್ನು ಸಾಗಿಸುವದು ಇವರ ಕೆಲಸಗಳಲ್ಲಿ ಒಂದಾಗಿತ್ತು. ಉತ್ತಮರೆನಿಸಿಕೊಂಡವರು ಬೇರೆಯವರ ಒಡವೆಗಳನ್ನು ಕದ್ದವನೇ ನಿತ್ಯ ಹೊಲೆಯ ಎಂದು ಸರ್ವಜ್ಞ ಹೇಳಿದರಲ್ಲಿ, ಹರಿಜನರು ಸತ್ತ ಪ್ರಾಣಿಗಳನ್ನು ಹೊತ್ತೊಯ್ದು ಊರ ಹೊರಗೆ ಹಾಕುವುದು ಇವರ ಕೆಲಸಗಳಲ್ಲಿ ಒಂದಾಗಿತ್ತು ಎಂಬುದು ಸ್ಪಷ್ಟ.

ಇಂಡಿ ತಾಲೂಕಿನ, ಹಲಸಂಗಿ ಗ್ರಾಮದ, 'ಧರ್ಮ ನಂದಪ್ಪ ಹಲಗಿ (ವಯಸ್ಸು 50)' ಬಸವನ ಬಾಗೇವಾಡಿ ತಾಲೂಕಿನ, ವಂದಾಲ ಗ್ರಾಮದ 'ಗ್ಯಾನಪ್ಪ ಯಮನಪ್ಪ ಛಲವಾದಿ(ವಯಸ್ಸು 40)' ಇವರು, ಹರಿಜನರು ಸಲ್ಲಿಸುತ್ತಿದ್ದ ಸೇವೆಯ ಬಗ್ಗೆ ಒಟ್ಟಾರೆ

ಮಾಹಿತಿ ಹೇಳಿದರು–‘‘ಹರಿಜನರು ಊರಲ್ಲಿ ದನ, ಎಮ್ಮೆಗಳು ಸತ್ತರೆ ಅವುಗಳನ್ನು ಎಳೆದುಕೊಂಡು ಹೋಗಿ ಊರ ಹೊರಗೆ ಸಾಗಿ ಹಾಕಿ, ಅವುಗಳ ಚರ್ಮ ಸುಲಿದು ಚರ್ಮಕಾರರಿಗೆ ಕೊಡತ್ತಿದ್ದೆವ್ರಿ. ಆದರೆ ಈ ಕೆಲಸ ಸದ್ಯಕ್ಕೆ ಮಾಡುತ್ತಿಲ್ಲ ಇನ್ನುಳಿದ ನಮ್ಮ ಸೇವೆಗಳನ್ನು ಮಾಡತೇವ್ರಿ. ಹಳ್ಳಿಯ ಎಲ್ಲರ ಮನೆಯ ಅಂಗಳ, ಹಳ್ಳಿಯ ಬೀದಿಗಳ ಕಸ ಗುಡಿಸುದು ನಮ್ಮ ಕೆಲಸ ಐತ್ರಿ. ಗುಡಿಸುವ ಕೆಲಸ ನಮ್ಮ ಹೆಣ್ಣಮಕ್ಕಳ ಮಾಡ್ತಾರಿ. ಹರಿಜನರ ಕೇರಿಗಳಲ್ಲಿ ಬ್ಯಾರೆ ಬ್ಯಾರೆ ಮನೆತನದ ‘ಗಡ್ಡಿ’(ಗುಂಪು)ಅದಾವ್ರಿ, ಇವರು ಒಂದು ಯುಗಾದಿಯಿಂದ ಇನ್ನೊಂದು ಯುಗಾದಿ ತನಕ ಊರಿನ ಎಲ್ಲ ಓಣಿಗಳನ್ನು ಹಂಚಕೊಂಡು ಗುಡಸೊ ಕೆಲಸಾ ಮಾಡ್ತರ್ರಿ. ಇದಕ್ಕೆ ‘ಊರು ಮಾಡುದು’ ಅಂತರ್ರಿ. ಇದಕ್ಕ ನಮ್ಮ ಕಡೆ ‘ವತನಕಿ’, ‘ಹೊಲೆತನ’, ‘ಒಕ್ಕಳಮಟ್ಟಿ’ ಅಂತ ಬ್ಯಾರೆ ಬ್ಯಾರೆ ಹೆಸರಿಂದ ಕರಿತಾರಿ. {ವತನಕಿ=ಹಿರಿಯರಿಂದ ಬಂದ ಅಸ್ತಿತ್ವ, ಕ್ಷೇತ್ರ, ಸಂಪತ್ತು. ಹೊಲೆತನ= ಕೆಳಮಟ್ಟದ ಕೆಲಸಗಳನ್ನು ಮಾಡುವುದು. ಒಕ್ಕಲಮಟ್ಟಿ= ಇಕ್ಕಳ(16 ಮಣ, ಅಂದರೆ 16 ಸೊಲಿಗೆ, 1 ಮಣ= 4 ಸೊಲಿಗೆ, 1 ಸೊಲಿಗೆ= 4 ಗಿದ್ದನ) ‘ಮಟ್ಟಿ’ ಎಂದರೆ ಜೋಳದ ಚೀಲ, ಗಂಟು ಎಂದರ್ಥ}.

ವರ್ಷಕ್ಕೆ ಇಷ್ಟು ಅಂತ ನಿರ್ಧರಿಸಿ ಆಯಕ್ಕ ಊರು ಮಾಡತೇವ್ರಿ. ಈಗ ಒಕ್ಕಲಿಗರ ಮನೆಯಲ್ಲಿ ದಿನಾ ಅಂಗಳಾ ಮತ್ತ ದನದ ಕೊಟ್ಟಿಗಿ ಸ್ವಚ್ಛ ಮಾಡುವುದು; ನೀರು ತರುದು; ಸೆಗಣಿ ತೆಗಿದು; ದನಗಳಿಗೆ ಹೊಲದಿಂದ ಮೇವು ತಂದ ಹಾಕುದು; ದನಗಳ ಮೈ ತೊಳೆದು; ನೀರು ಕುಡಿಸುದು; ಹೊಲ ಕಾಯುದು; ಗಳೆ–ಗಾಡಿ ಹೊಡಿಯುವುದು; ಮನೆಗೆ ಉರುವಲಿಕ ಕಟ್ಟಿಗೆ–ಕುಳ್ಳು ತರುದು ಹಿಂಗ ಎಲ್ಲ ಮಾಡತ್ತೇವ್ರಿ. ಕಾಳಿನ ತೆನೆಗಳನ್ನು ಹಕ್ಕಿಗಳು ತಿನ್ನಲು ಬರದಂಗ ಕವಣಿ ಹೊಡೆತ್ತೇವ್ರಿ. ಅಟ್ಟಾ ಕಟ್ಟಿ ಅದರ ಮೇಲೆ ನಿಂತು ‘ಕವಣಿ’ಯಿಂದ ಹಕ್ಕಿ ಹೊಡಿತ್ತೇವ್ರಿ (ಕವಣಿ ತೊಗಲಿನಿಂದ ಅಥವಾ ನೂಲಿನಿಂದ ಅಥವಾ ನಾರಿನಿಂದ ತಯಾರಿಸಿದ ವಸ್ತು. ಇದರಲ್ಲಿ, ಚಿಕ್ಕ ಚಿಕ್ಕ ಕಲ್ಲುಗಳಿಟ್ಟು ಬೀಸಿ ಹೊಡೆಯುವ ಸಾಧನ). ರಾಶಿಗಳ ಬೆಳೆಯನ್ನು ಕೊಯ್ದು, ಸೂಡು ಕಟ್ಟಿ ಗೂಡು ಬಡಿತ್ತೇವ್ರಿ. ನಂತರ ಹೊಲದಲ್ಲಿ ಬಿದ್ದ ತೆನೆಗಳನ್ನು ಉಡಿಕಟ್ಟಿ ಆಯ್ದುಕೊಳ್ಳಾಕ ನಮ್ಮ ಜನಾ ಹೋಗತಾರ್ರಿ. ಇದಕ್ಕ ‘ಹಕ್ಕಲಾ ಆಯುವುದು’ ಅಂತ ನಮ್ಮ ಕಡೆ ಅಂತಾರಿ. ಹಕ್ಕಲದ ತೆನಿಗಳೂ ನಾವ ತೆಗೆದುಕೊಂಡು ಹೋಗಿ ತೆನೆ ಬಡಿದುಕೊಂಡು ಕಾಳು ಮಾಡ್ಕೊತಿವ್ರಿ. ರಾಶಿ ಮಾಡಾಕ ಕಣ ಕಡಿಯುದು ನಮ್ಮ ಮಂದಿ ಕೆಲಸರಿ, ಮಣ್ಣನ್ನೆಲ್ಲ ತೆಗೆದು, ನೀರು ಹೊಡೆದು, ಮೇಟಿ ಕಂಬ ಜಡದು ಅದರ ತುದಿಗೆ ಸ್ವಲ್ಪ ತೆನೆಗಳನ್ನು ಕಟ್ಟಿ ತೆನೆ ಮುರ್ಯಾಕ ಚಾಲು ಮಾಡತ್ತೆವ್ರಿ. ತೆನೆ ತಂದು ಕಣದಲ್ಲಿ ಹಾಕಿ, ಕಣದ ಮಣ್ಣನ್ನು ಸಮೀಪದ ಹಾದ್ಯಾಗ ಅಡ್ಡ ಐದು ಸಾಲು ಹಾಕಿ ಬರತ್ತಿದ್ದೆವ್ರಿ. ಇದರ ಉದ್ದೇಶ ಹಾದ್ಯಾಗ ಹೋಗುವರಿಗೆ ಇಲ್ಲಿ ರಾಶಿ ನಡದದ ಅವರು ಬಂದು ಕಾಳ(ಧಾನ್ಯ) ತೆಗೆದುಕೊಂಡು ಹೋಗ್ರಿ ಎಂದು ಹೇಳುವು–

ರ್ರಿ. ರಾಶಿ ನಂತರ ಹಂತಿ ಹೊಡೆಯುವುದು ಕೂಡಾ ಹರಿಜನರ ಕೆಲಸವೇ ಆಗಿತ್ರಿ. ದನಗಳನ್ನು ಕಣದ ಮೇಟಿ ಸುತ್ತ ಸಾಲಾಗಿ ನಿಲ್ಲಿಸಿ, ಕಣದ ಮೇಟಿಗೆ ಹಗ್ಗದಿಂದ ಸಾಲಾಗಿ ಎತ್ತುಗಳನ್ನ ಕಟ್ಟತ್ತಿದ್ದೇವು, ಇದಕ್ಕೆ 'ದಾವಣಿ' ಅಂತ ಕರಿತಾರ್ರಿ. ಇದರಾಗ ತೆನೆಗಳನ್ನು ಹಾಕಿ ಎತ್ತುಗಳಿಂದ ತುಳಿಸುವದು, ತೆನೆಯಿಂದ ಪೂರ್ತಿ ಕಾಳು ಬ್ಯಾರೆ ಆಗುತನ ಹಂತಿ ಹೊಡೆಯುತ್ತಿದ್ದೇವರಿ. ಹಂತಿ ಕಟ್ಟುವಾಗಿನಿಂದ ಹಿಡಿದು ರಾಶಿ ಮುಗಿಯುತನಕ ಎಲ್ಲ ಕೆಲಸಾನೂ ಮಾಡುವರು ಹರಿಜನರಿ. ರಾಶಿ ಆದ ನಂತರ ಚೀಲದಲ್ಲಿ ರಾಶಿ ಕಾಳ ತುಂಬಿ ರೈತರ ಮನೆಗೆ ತಂದು ಹಾಕತ್ತಿದ್ದೇವ್ರಿ'' ಎಂದು ಹೇಳಿದರು.

ಹಾಗೆಯೇ, ಒಕ್ಕಲಿಗರ ಮನೆಯಲ್ಲಿ, ಮದುವೆ ನಡೆದರೆ, ಹಬ್ಬ-ಹುಣ್ಣಿಮೆ ಬಂದರೆ, ಕನ್ಯೆ ಋತುಮತಿಯಾದರೆ, ಹೆರಿಗೆಯಾದರೆ, ತೀರಿಕೊಂಡರೆ ಮನೆಗೆ ಸುಣ್ಣ-ಬಣ್ಣ ಹಚ್ಚಿ ಮನೆ ಸ್ವಚ್ಚ ಮಾಡಿ ಕೊಡುದು, ಕಟ್ಟಿಗಿ ಒಡಿಯುದು, ನೀರು ತರುದು ನಮ್ಮ ಮಂದಿ ಮಾಡು ಕೆಲಸಗಳರಿ. ಊರ ದೇವತೆಯ ಜಾತ್ರೆ-ಉತ್ಸವ ಇದ್ದಾಗ ಗುಡಿ ಮುಂದ ಮತ್ತ ಊರಾಗ ಮದುವೆ ಇದ್ರ ಹಂದರ ಹಾಕುದು, ಜಾತ್ರೆ ಮುಗಿದ ನಂತರ ಇಳಿಸುವದು ನಮ್ಮ ಕೆಲಸಾರಿ. ಮದುವೆ, ಜಾತ್ರೆ ಮೆರವಣಿಗೆ ಮಾಡಾಗ ಗ್ಯಾಸ್ (ಪೆಟ್ರೊಮ್ಯಾಕ್ಸ) ಹೊತ್ತಗೊತಿವ್ರಿ. ದೀವಟಿಗೆ ಹಿಡಿಯುದು ಮಾಡತೇವ್ರಿ. ನಾಟಕ-ಬಯಲಾಟ ಇದ್ರ ಬಯಲನ್ಯಾಗ 'ಅಟ್ಟಾ' (ಮಂಟಪ) ಹಾಕುದು ನಾವೇರಿ. ಊರಲ್ಲಿ ಯಾರರೆ ತೀರಿಕೊಂಡರ ಸತ್ತ ಸುದ್ದಿ ಮುಟ್ಟಿಸತೇವ್ರಿ (ಮೇಲ್ವರ್ಗದವರ ಜನ ಸತ್ತ ಸುದ್ದಿ ಊರ ಜಂಗಮರು ಮುಟ್ಟಿಸುವರು). ಹೆಣ ಮಣ್ಣ ಮಾಡಾಕ ನಾವ 'ಸಮಯ'(ಗೋರಿ) ತೆಗಿತೇವ್ರಿ. ನಮ್ಮ ಹೆಣ್ಣು ಮಕ್ಕಳು ರೈತರ ಮನ್ಯಾಗ ಕುಟ್ಟುದು, ಬೀಸುದು, ಕಾಳ-ಕಡಿ ಸ್ವಚ್ಚ ಮಾಡಿ ಕೊಡುದು ಎಲ್ಲಾ ಕೆಲಸ ಮಾಡತರ್ರಿ'', ಎಂದು ಹೆಳಿದರು.

ಕ್ರಿ. ಶ. 1972 ರಲ್ಲಿ ಜಾರಿಯಾದ, ಆಗಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರ 20-ಅಂಶದ ಕಾರ್ಯಕ್ರಮದಲ್ಲಿ ಹರಿಜನರು ಮತ್ತು ಮಾದಿಗರು ಮಾಡುತ್ತಿದ್ದ ಪಾರಂಪರಿಕ ಅಮಾನವೀಯ ಕೆಲಸಗಳನ್ನು ನಿಲ್ಲಿಸಲಾಯಿತು. ಸತ್ತ ದನಗಳನ್ನು ಎತ್ತುವುದು, ಚರ್ಮ ಸುಲಿಯುವುದು, ಕೃಷಿಕರ ಮನೆಯಲ್ಲಿ ಕೃಷಿಜೀತದಾಳಾಗಿ ದುಡಿಯುವುದನ್ನು ನಿಷೇಧಿಸಲಾಯಿತು. ಆದರೆ ಹರಿಜನರು ಕೃಷಿಕರ ಮನೆಯಲ್ಲಿ ಸಣ್ಣ-ಪುಟ್ಟ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ.

ಗ್ರಾಮದಲ್ಲಿಯ ಎಲ್ಲ ಸಮುದಾಯದ ಆಯಗಾರರಿಗೆ ಹರಿಜನರು ತಮ್ಮ ಸೇವೆ ಸಲ್ಲಿಸುವರು. ಇನ್ನುಳಿದ ತಳ ಸಮುದಾಯದ ಆಯಗಾರರ ಸಮುದಾಯಗಳಾದ ಚಮ್ಮಾರ, ಬಜಂತ್ರಿ ಮತ್ತು ಕ್ಷೌರಿಕರಿಗೂ ಕೂಡಾ ಹರಿಜನರು ತಮ್ಮ ಸೇವೆ ಸಲ್ಲಿಸುತ್ತಾರೆ.

ಈ ಸಮುದಾಯದವರಿಂದ ಹರಿಜನರಿಗೆ ಆಯ ದೊರೆಯದಿದ್ದರೂ ಪ್ರೀತಿ ವಿಶ್ವಾಸದಿಂದ ನಿಸ್ವಾರ್ಥತೆಯಿಂದ ಸೇವೆ ಸಲ್ಲಿಸುತ್ತಾರೆ. ಚಮ್ಮಾರ ಮತ್ತು ಬಜಂತ್ರಿಯವರಿಂದ ತಯಾರಿಸಿದ ವಸ್ತು ಮತ್ತು ಸೇವೆ ಹರಿಜನರಿಗೆ ದೊರೆತರೂ, ಕ್ಷೌರಿಕರು ಕ್ಷೌರ ಮಾಡುತ್ತಿರಲಿಲ್ಲ, ಇತ್ತೀಚೆಗೆ ಕ್ಷೌರಿಕರೂ ಎಲ್ಲರಿಗೂ ಕ್ಷೌರ ಸೇವೆ ಮಾಡುವುದನ್ನು ಕಾಣಬಹುದು.

ಗ್ರಾಮೀಣ ಸಮಾಜದಲ್ಲಿ ಆಯಗಾರರು ವಿವಿಧ ಸಮುದಾಯದ ಕಸಬಿನವರಿದ್ದರೂ ಒಂದೊಂದು ಕಸಬಿನವರು ಇತರ ಕಸಬುದಾರರ ನೆರವು ಸಹಕಾರ ಪಡೆಯುವುದು ಅನಿವಾರ್ಯ. ಕೆಲ ಸಂದರ್ಭದಲ್ಲಿ ಧನಿ(ಕೊಡುವವನು) ಆದವ ಮತ್ತೊಂದು ಬಾರಿ ಆಯಗಾರರ ಸರೀಕನಾಗಿರುತ್ತಾನೆ. ಎಲ್ಲ ಆಯಗಾರರು 'ಪರಸ್ಪರ ಪೋಷಕ' ಸಂಬಂಧವನ್ನು ಹೊಂದಿದ್ದು, ಕಸಬುಗಳು ಭಿನ್ನವಾಗಿದ್ದರೂ ಅವರು ಗ್ರಾಮ್ಯ ಕೃಷಿಕ ಸಾಮುದಾಯಿಕವಾಗಿ ಒಗ್ಗಟ್ಟಿನಿಂದ ಇರುವರು. ಕುಂಬಾರರು, ಬಡಿಗೇರರು, ಅಗಸರು, ಹೂಗಾರರು ಬೇರೆಯವರ ಹೊಲಕ್ಕೆ ಹೋದಾಗ ಆಯಗಾರರಾಗಿರುತ್ತಾರೆ. ತಮ್ಮ ಹೊಲದ ರಾಶಿ ಸಂದರ್ಭದಲ್ಲಿ ಕೊಡುವ ಸ್ಥಾನದಲ್ಲಿ ನಿಲ್ಲುವರು. ಇಲ್ಲಿ ಅವರಿಗೆ ಕೊಡುತ್ತೇನೆನ್ನುವ 'ಅಹಂ'ಕ್ಕಿಂತ ಹಂಚಿ ತಿನ್ನುವ ತೃಪ್ತಿ, ಸಂತೋಷ ಪ್ರಧಾನವಾಗಿರುತ್ತದೆ. ಕೃಷಿಕರು ಮತ್ತು ಆಯಗಾರರು ಪರಸ್ಪರ ಅವಲಂಬಿತವಾಗಿರುವುದು ಕೃಷಿ ಗ್ರಾಮ್ಯ ಸಮುದಾಯದ ವೈಶಿಷ್ಟ್ಯ ಮತ್ತು ಸಮಷ್ಠಿ ಶಕ್ತಿಯಾಗಿದೆ.

ಆಯಗಾರಿಕೆಯು ನಿಧಾನವಾಗಿ ಗ್ರಾಮೀಣ ಪ್ರದೇಶದಿಂದ ಕಣ್ಮರೆಯಾಗುತ್ತ ಸಾಗಿದೆ. ಪ್ರಧಾನ ಸಂಸ್ಕೃತಿ ಹಾಗೂ ಉಪಸಂಸ್ಕೃತಿ; ಮೇಲ್ವರ್ಗ ಹಾಗೂ ತಳಸಮುದಾಯಗಳ ನಡುವಿನ ಸಂಬಂಧಗಳ ಕೊಂಡಿ ಸಂಪೂರ್ಣವಾಗಿ ಕಳಚಿಕೊಳ್ಳುತ್ತಲಿದೆ ಎಂದರೆ ಆಶ್ಚರ್ಯವೇನಿಲ್ಲ. ಸಾಮಾನ್ಯವಾಗಿ ಬಡಿಗೇರರು, ಹೂಗಾರರು, ಕ್ಷೌರಿಕರು ಮತ್ತು ಅಗಸರು ಆಯಗಾರಿಕೆಯಲ್ಲಿ ನಿರತವಾಗಿರುವ ಸಮುದಾಯಗಳಾಗಿವೆ. ಬಡಿಗೇರರು ಕೃಷಿಗೆ ಬೇಕಾಗುವ ಉಪಕರಣಗಳನ್ನು ತಯಾರಿಸಿ ಕೊಡುವುದರಿಂದ ಎಲ್ಲ ಕಾಲಕ್ಕೂ ಅವಶ್ಯವಾಗಿರುವಂತಹ ಆಯಗಾರರು. ಹಾಗೆಯೇ ಹೂಗಾರರು, ಕ್ಷೌರಿಕರು ಮತ್ತು ಅಗಸರು ಸ್ವಲ್ಪ ಮಟ್ಟಿಗೆ ತಮ್ಮ ಮನೆತನದ ವೃತ್ತಿಯ ಜೊತೆಗೆ ಇತರೇ ವೃತ್ತಿಯಲ್ಲಿ ತೊಡಗಿರುವುದನ್ನು ಕಾಣಬಹುದಾಗಿದೆ.

## ಕೊನೆ ಟಿಪ್ಪಣಿಗಳು:

1. ಅರ್ಜುನ ಗೊಳಸಂಗಿ, (2000), ದಲಿತರ ಬದುಕು ಮತ್ತು ಸಂಸ್ಕೃತಿ: ಜಾನಪದೀಯ ಅಧ್ಯಯನ, ದಲಿತ ಸಾಹಿತ್ಯ ಪರಿಷತ್ತು, ಗದಗ, ಪು. ಸಂ. 19
2. ಅದೇ, ಪು. ಸಂ. 79
3. ಅದೇ, ಪು. ಸಂ. 80

## ಪರಾಮರ್ಶನ ಗ್ರಂಥಗಳು:

1. ಅರ್ಜುನ ಗೊಳಸಂಗಿ, (2000), ದಲಿತರ ಬದುಕು ಮತ್ತು ಸಂಸ್ಕೃತಿ: ಜಾನಪದೀಯ ಅಧ್ಯಯನ, ದಲಿತ ಸಾಹಿತ್ಯ ಪರಿಷತ್ತು, ಗದಗ.
2. ವೃಷಭೇಂದ್ರಸ್ವಾಮಿ (ಸಂ), (1982), ಜಾನಪದ ಸಾಹಿತ್ಯ ದರ್ಶನ–7, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4. 0 International License.